ಕರ್ನಾಟಕ ಮಾಹಿತಿ ಆಯೋಗ

ಬೆಂಗಳೂರು

ನ್ಯಾಯಾಲಯ ಸಭಾಂಗಣ–2

ದ್ವಾರ ಸಂಖ್ಯೆ–2, 3ನೇ ಅಂತಸ್ತು, ಬಹುಮಹಡಿಗಳ ಕಟ್ಟಡ,

ಡಾ॥ ಅಂಬೇಡ್ಕರ್ ವಿಧಿ, ಬೆಂಗಳೂರು–1

ಆಯೋಗದ ಅಂತರ್‌ಜಾಲ www.kic.gov.in

ಕಮಾಆ 1319 ಎಪಿಎಲ್ 2014

(ಪ್ರೊ. ಪಿ.ಬಿ. ಜೋಶಿ ವಿರುದ್ಧ 1) ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು (ಆಡಳಿತ), ನಿದೇಶಕರ ಕಛೇರಿ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು. 2) ಪ್ರಥಮ ಮೇಲ್ಮನವಿ ಪ್ರಾಧಿಕಾರಿ ಹಾಗೂ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು.)

ಆದೇಶ

ದಿನಾಂಕ: 28.06.2016

1. ಅರ್ಜಿದಾರರು ಹಾಜರಿರುತ್ತಾರೆ. ಪ್ರತಿವಾದಿಯಾದ ಪ್ರಾಂಶುಪಾಲರು, ಎಸ್.ಡಿ.ಎಂ.ಇಂಜಿನಿಯರಿಂಗ್ ಕಾಲೇಜ್, ಧಾರವಾಡ ರವರ ಪರವಾಗಿ ಶ್ರೀ ಜಿ.ಎಂ.ವಸ್ತ್ರದ್, ವಕೀಲರು ವಕಾಲತ್ತಿನೊಂದಿಗೆ ಹಾಜರಿರುತ್ತಾರೆ. ಮತ್ತು ಶ್ರೀಮತಿ ಪವಿತ್ರ ಪಿ.ಎಸ್, ಪ್ರೋಜೆಕ್ಟ್ ಆಫೀಸರ್ಸ್, ಸಿ.ಓ. ಇ ಎಸ್.ಪಿ.ಎಫ್.ಯು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ರವರು ಅನುಮತಿ ಪತ್ರದೊಂದಿಗೆ ಹಾಜರಿರುತ್ತಾರೆ.

2. ಅರ್ಜಿದಾರರು ತಮ್ಮ ಮಾಹಿತಿ ಕೋರಿಕೆ ಅರ್ಜಿ ದಿನಾಂಕ 03.09.2013ರಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 6(1)ರ ಅಡಿಯಲ್ಲಿ ಕೆಳಕಂಡ ವಿಷಯಗಳ ಮಾಹಿತಿಯನ್ನು ಕೋರಿರುತ್ತಾರೆ.

"Following are the nine of twenty-six faculty of SDMCET Dharwad, with PhD in Engineering discipline, whose names have been given to TEQIP for seeking assistance under TEQIP Phase-II.
The faculty list is as under.

i)	Dr. H.D. Desai	Department of Civil Engineering
ii)	Dr. Kuppagal Veeresh	Department of Mechanical Enginerring
iii)	Dr. Bhimsen Soregaon	Department of Mechanical Enginerring
iv)	Dr. Girish Kumar	Department of Mechanical Enginerring
v)	Dr. Anantha Prasad	Department of Mechanical Enginerring
vi)	Dr. P. Jayakumar	Department of Mechanical Enginerring
vii)	Dr. Rajkiran	Department of Mechanical Enginerring
viiii)	Dr. S.L. Deshpande	Department of Computer Science Enginerring
ix)	Dr. Umesh Deshannavar	Department of Computer Science Enginerring

Kindly furnish the following information with respect to these faculties.

COMMISSION ★ KAR

(a) **Certified copy of date of joining of service at SDMCET Dharwad.**

(b) **Certified copy of the attendance register from Jan-2012 or from the date of Joining of service at SDMCET whichever is later till date.**

(c) **Certified copy of the Salary components credited to bank from Jan-2012 or from date of joining of service at SDMCET Dharwad whichever is later till date.**

3. ಪ್ರತಿವಾದಿಯಾದ ಸಾರ್ವಜನಿಕ ಮಾಹಿತಿ ಅಧಿಕಾರಿಯು ಯಾವುದೇ ಕ್ರಮವನ್ನು ವಹಿಸದೇ ಇರುವುದರಿಂದ ಅರ್ಜಿದಾರರು ದಿನಾಂಕ 05.12.2013ರಂದು ಕಾಯ್ದೆಯ ಕಲಂ 19(1)ರಡಿಯಲ್ಲಿ ತಮ್ಮ ಮೊದಲನೇ ಮೇಲ್ಮನವಿಯನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು ರವರಿಗೆ ಸಲ್ಲಿಸಿರುತ್ತಾರೆ. ಅರ್ಜಿದಾರರು ಮೇಲ್ಮನವಿಯನ್ನು ಸಲ್ಲಿಸಿದ ದಿನಾಂಕದಿಂದ ಒಟ್ಟು 45 ದಿನಗಳನ್ನು ಮೀರದಂತೆ ಪ್ರಕರಣಗಳನ್ನು ಇತ್ಯರ್ಥ ಪಡಿಸಬೇಕಾಗಿರುವುದು ಪ್ರಥಮ ಮೇಲ್ಮನವಿ ಪ್ರಾಧಿಕಾರದ ಆದ್ಯ ಕರ್ತವ್ಯವಾಗಿರುತ್ತದೆ.

4. ಅರ್ಜಿದಾರರು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 19(3) ರನ್ವಯ ದಿನಾಂಕ 25.01.2014ರಂದು ದ್ವಿತೀಯ ಮೇಲ್ಮನವಿ ಸಲ್ಲಿಸಿರುತ್ತಾರೆ. ದಿನಾಂಕ 20.04.2015ರಂದು ಉಭಯತ್ರರವರಿಗೆ ನೋಟೀಸ್ ಜಾರಿಗೊಳಿಸಿರುತ್ತದೆ.

5. ಪ್ರತಿವಾದಿಯಾದ ಜಂಟಿ ನಿರ್ದೇಶಕರು (ಆಡಳಿತ) ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ ರವರು ದಿನಾಂಕ 05.09.2013ರಂದು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 6(3)ರನ್ವಯ ಅರ್ಜಿಯನ್ನು ಪ್ರಾಂಶುಪಾಲರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ, ಧಾರವಾಡ ರವರಿಗೆ ವರ್ಗಾಯಿಸಿರುತ್ತಾರೆ.

6. ದಿನಾಂಕ 06.05.2015 ರಂದು ನಿರ್ದೇಶಕರು ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರದವರು ತಮ್ಮ ಜ್ಞಾಪನ ಪತ್ರದ ಮೂಲಕ ಪ್ರೋ॥ ಪಿ.ಬಿ.ಜೋಷಿ, ಧಾರವಾಡ ಇವರ ದ್ವಿತೀಯ ಮೇಲ್ಮನವಿಗೆ ಪ್ರಥಮ ಮೇಲ್ಮನವಿ ಪ್ರಾಧಿಕಾರಿಯವರು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಯವರ ಪ್ರತಿನಿಧಿಯಾದ ಶ್ರೀ ಮನೋಹರ.ಜಿ.ನಾಯಕ್, ಸ್ಟೇಟ್ ಪ್ರೊಜೆಕ್ಟ್ ಕೋ-ಅರ್ಡಿನೇಟರ್, (ಒ.ಎಸ್.ಡಿ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ರವರನ್ನು ನಿಯೋಜಿಸಿರುತ್ತಾರೆ.

7. ಅರ್ಜಿದಾರರು ದಿನಾಂಕ 08.05.2015 ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ಮಾಹಿತಿಯ ಜೊತೆಯಲ್ಲಿ ಪರಿಹಾರ ರೂಪದಲ್ಲಿ ಅನುಭವಿಸಿರುವ ಕಷ್ಟ ಹಾಗೂ ಇತರೆ ವೆಚ್ಚಗಳಿಗಾಗಿ ರೂ.3,000/-ಗಳನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

KARNATAKA INFO

8. ದಿನಾಂಕ 06.05.2015ರಂದು ಆಯೋಗಕ್ಕೆ ಮತ್ತೊಂದು ಪತ್ರವನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು (ಆಡಳಿತ) ರವರು ಬರೆದಿದ್ದು ದಿನಾಂಕ 21.01.2014ರಂದು ನಡೆದ ವಿಚಾರಣೆಯಲ್ಲಿ ಪ್ರಾಶುಂಪಾಲರ ಪರವಾಗಿ ಹಾಜರಾಗಿದ್ದ ಶ್ರೀ ಜಿ.ಎಂ.ವಸ್ತ್ರದ್ ವಕೀಲರು ತಮ್ಮ ಲಿಖಿತ ಆಕ್ಷೇಪಣೆ ಸಲ್ಲಿಸಿ, ತಮ್ಮ ಸಂಸ್ಥೆ ಖಾಸಗಿ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಅಧಿನಿಯಮದನ್ವಯ ಮಾಹಿತಿ ನೀಡಲು ಬದ್ಧರಿರುವುದಿಲ್ಲ ಸದರಿ ಅಂಶವನ್ನು ಮಾನ್ಯ ಮಾಹಿತಿ ಆಯೋಗದ ಪ್ರಕರಣ ಸಂಖ್ಯೆ: ಕೆಐಸಿ 8520 ಪಿಟಿಎನ್ 2012 ಪ್ರಕರಣದಲ್ಲಿ ಮಾನ್ಯ ಆಯುಕ್ತರು ಎತ್ತಿಹಿಡಿದಿರುತ್ತಾರೆ. ಅಲ್ಲದೆ, ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳು ಮಾಹಿತಿ ಹಕ್ಕು ವ್ಯಾಪ್ತಿಗೆ ಬರುವುದೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 13784–785/2013 ರಲ್ಲಿನ ಅಂತಿಮ ತೀರ್ಪು ಬರುವವರೆಗೆ ಸದರಿ ಕಾಲೇಜಿಗೆ ಮಾಹಿತಿ ಹಕ್ಕು ಕಾಯ್ದೆ ಅನ್ವಯಿಸುವುದೋ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು. ಸದರಿ ಆಕ್ಷೇಪಣೆಗಳನ್ನು ಅರ್ಜಿದಾರರ ಪರವಾಗಿ ಅವರ ಪ್ರತಿನಿಧಿಗಳಿಗೆ ನೀಡಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುವಂತೆಯೂ ಮೇಲ್ಮನವಿ ಪ್ರಾಧಿಕಾರಿಯವರು ವಿಚಾರಣೆಯನ್ನು ಮುಂದೂಡಿದರು.

ಮುಂದುವರಿದು, ಶ್ರೀ ಎನ್.ಎಸ್.ನಾಡ್‌ಗೀರ್ ಹುಬ್ಬಳ್ಳಿ ಇವರು ಸಹ ಮೇಲ್ಕಂಡ ಮಾಹಿತಿಯನ್ನು ಕೋರಿದ್ದು, ಸದರಿಯವರ ಅರ್ಜಿಯನ್ನೂ ಸಹ ಎಸ್.ಡಿ.ಎಂ. ಕಾಲೇಜಿಗೆ ವರ್ಗಾಯಿಸಿದ್ದು, ಮಾಹಿತಿಯನ್ನು ನೀಡಿರುವುದಿಲ್ಲವೆಂದು ಮಾನ್ಯ ಮಾಹಿತಿ ಆಯೋಗದಲ್ಲಿ ದ್ವಿತೀಯ ಮೇಲ್ಮನವಿಯನ್ನು ಸಲ್ಲಿಸಿದ್ದರು. ಅದರಂತೆ ಸದರಿ ಪ್ರಕರಣ ಸಂ.: ಕೆಐಸಿ 454 ಎಪಿಎಲ್ 2014 ರಲ್ಲಿ ದಿನಾಂಕ 25.11.2014ರಂದು ನಡೆದ ವಿಚಾರಣೆಯಲ್ಲಿ ಅರ್ಜಿದಾರರು ಕೋರಿರುವ ಮಾಹಿತಿಯನ್ನು 15 ದಿನಗಳೊಳಗಾಗಿ ಅರ್ಜಿದಾರರಿಗೆ ಕಳುಹಿಸುವಂತೆ ಆದೇಶಿಸಿರುವ ಹಿನ್ನಲೆಯಲ್ಲಿ ಅರ್ಜಿಯಲ್ಲಿ ಕೋರಿರುವ ಮಾಹಿತಿಯನ್ನು ನೀಡುವಂತೆ ಪ್ರಿನ್ಸಿಪಾಲರು, ಎಸ್.ಡಿ.ಎಂ.ಇಂಜಿನಿಯರಿಂಗ್ ಕಾಲೇಜು, ಧಾರವಾಡ, ಇವರಿಗೆ ಮತ್ತೊಮ್ಮೆ ಉಲ್ಲೇಖ (6)ರ ಈ ಕಛೇರಿ ಪತ್ರಗಳಲ್ಲಿ ತಿಳಿಸಲಾಗಿತ್ತು. ಸದರಿ ಸಂಸ್ಥೆಯ ಪ್ರಿನ್ಸಿಪಾಲರು ಉಲ್ಲೇಖ (7)ರ ಪತ್ರದಲ್ಲಿ ಈ ಕೆಳಕಂಡ ಅಂಶಗಳನ್ನು ಉಲ್ಲೇಖಿಸುತ್ತಾ, ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 2(ಹೆಚ್) ಪ್ರಕಾರ ತಮ್ಮ ಸಂಸ್ಥೆಯು ಸಾರ್ವಜನಿಕ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡದ ಕಾರಣ ಮಾಹಿತಿ ನೀಡಲು ಬದ್ಧರಾಗಿರುವುದಿಲ್ಲ ತಿಳಿಸಿ ಮಾಹಿತಿಯನ್ನು ನೀಡಲು ನಿರಾಕರಿಸಿರುತ್ತಾರೆ.

a) **Similar application was filed by Prof. N.S. Nadigir seeking information under RTI Act in respect of 09 Ph.D.holders. This matter was taken up for hearing by appropriate authority under RTI and said authority was pleased to pass an order upholding our contention that the provision of RTI Act are not applicable to us as we do not come under the purview of definition of "Public Authority" under section 2(h) of RTI Act. Similar decision also was given by the said Authority in another case Sir**

KARNATAKA INFORM

Praveen's case) confirming that our Institution doesn't come under the definition of "Public Aythority" and as such we are not legally liable to furnish any information sought for under RTI Act.

b) Writ petition filed by R.V. college of Engineering, Bangalore on an identical issue, has granted stay on the order of the commissioner who had held that the said engineering college was public authority.

c) The final judgment of High Court of Karnataka as per our knowledge has not yet come out. The present status therefore is that the stay granted is still operative.

d) The Hon'ble Supreme Court of India in civil appeal No.9017 of 2013 has held that even the co-operative society registered under Co-operative Society's Act will not fall within the definition of public authority as defined under section 2(h) of RTI Act.

e) The Hon'ble Apex Court further very clearly held that in absence of materials to show that they are owned, controlled or substantially financed by appropriate Government does not fall within the said definition of public authority. The appeal filed therefore was dismissed.

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಧಾರವಾಡ ಈ ಸಂಸ್ಥೆಗೆ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಪ್ರಾಯೋಜಿಸಿರುವ ಟೆಕ್ವಿಪ್ (Technical Eduction Quality Improvement Program) ವತಿಯಿಂದ ಹಣ ಬಿಡುಗಡೆ ಮಾಡುತ್ತಿದ್ದು, ಸದರಿ ಸಂಸ್ಥೆಗೆ ಸರ್ಕಾರದ ವತಿಯಿಂದ 100% ವೇತನಾನುದಾನವನ್ನು ನೀಡುತ್ತಿಲ್ಲ. ಹೀಗಾಗಿ ಅರ್ಜಿದಾರರು ಕೋರಿರುವಂತೆ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾ ವಿವರ ವೇತನ ಇತ್ಯಾದಿಗಳ ಬಗ್ಗೆ ನಿರ್ದೇಶನಾಲಯದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. ಆದಕಾರಣ ಸದರಿ ಸಂಸ್ಥೆಗೆ ಮಾಹಿತಿ ನೀಡುವಂತೆ ತಿಳಿಸಲಾಗಿತ್ತು. ಆದರೆ ಸಂಸ್ಥೆಯವರು ಮಾಹಿತಿಯನ್ನು ನೀಡಲು ನಿರಾಕರಿಸಿರುವ ಹಿನ್ನಲೆಯಲ್ಲಿ ಅರ್ಜಿದಾರರು ಕೋರಿರುವ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತಿಲ್ಲ ಎಂದು ಮಾನ್ಯ ಆಯೋಗದ ಅವಗಾಹನೆಗೆ ತರುತ್ತಾ, ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಕೋರಿರುತ್ತಾರೆ.

KARNATAKA INFORMATION COMMISSION

9. ದಿನಾಂಕ 25.09.2015 ರಂದು ಡಾ॥ ಎಸ್.ಬಿ. ವನಕುದ್ರೆ, ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರು ದಿನಾಂಕ: 26.09.2015ರ ಆಕ್ಷೇಪಣೆಯಲ್ಲಿ ನಮ್ಮ ಸಂಸ್ಥೆಯು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 9017 ಆಫ್ 2013 ರ ಆದೇಶವನ್ನು ಉಲ್ಲೇಖಿಸಿರುತ್ತಾರೆ.

10. ಅರ್ಜಿದಾರರು ದಿನಾಂಕ 28.06.2016ರಂದು ಆಕ್ಷೇಪಣೆ ಪತ್ರದ ಮುಖಾಂತರ ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯ State Project Facilitation (TEQIP), ದಿನಾಂಕ 29.12.2012 ರ ಮೆಮೋದಲ್ಲಿ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ರವರು ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರಿಗೆ ಪಿ.ಡಿ ಖಾತೆ ಮುಖಾಂತರ ನೂರು ಲಕ್ಷ ರೂ.ಗಳನ್ನು ಮುಂದಿನ ಅನುಪಾತದ ರೂಪದಲ್ಲಿ ಎರಡನೇ ಕಂತಾಗಿ ಸಾಮಾನ್ಯ ವರ್ಗಕ್ಕೆ 77.50% ಪರಿಶಿಷ್ಟ ಜಾತಿಗೆ ಶೇ.15% ಎಸ್.ಟಿ. ವರ್ಗಕ್ಕೆ ಶೇ 7.50% = 100 ಲಕ್ಷ ರೂಗಳನ್ನು ಬಿಡುಗಡೆ ಮಾಡಿರುವ ಪ್ರತಿಗಳನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ.

11. ದಿನಾಂಕ 04.06.2016ರಂದು ಅರ್ಜಿದಾರರು ಮತ್ತೊಮ್ಮೆ ತಮ್ಮ ಆಕ್ಷೇಪಣೆಯಲ್ಲಿ ಹಲವಾರು ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಉಲ್ಲೇಖಿಸುತ್ತಾ, ಬಹು ಮುಖ್ಯವಾಗಿ ಕೆಳಕಂಡ ತೀರ್ಮಾನವನ್ನು ಆಯೋಗವು ಗಮನಿಸಿದೆ.

a) **The Punjab Information Commissioner has ruled on 7th September 2011that Private Universities, Engineeing and Medecal colleges and other private institutions are public Authorities, and hence covered under RTI Act 2005-on the basis of Judgement of Punjab & Haryana High Court in Christian Medical College Ludiana – quoting that the private bodies discharging public duties have social responsibility amd thus cannot take shelter behind secrecy.**

b) **Bombay High Court in CWP No.5132 of 2008, given the fact State Government, AICTE and affiliating University actually participate in the management of the institute by sitting in the governing body and the fact that their number in the governing body is substantial, it must be held that the participation of AICTE/University/State Government amounts to effective control of the institute.**

c) **Hon'ble Delhi High Court in Purnaprajna Public School Vs. Central Information Commission considered similar provisions pertaining to unaided schools recognized under the Delhi School Education Act, 1973 and held that unaided**

KA INFORMATION COMMISS

private recognized schools are covered under the RTI act, 2005 for the reason that Delhi Directorate of Education has the power to nominate the members of the governing body who access any information from the private schools, apart from participating in the Management of such any information from the private schools, apart from participating in the Management of such institution. The Delhi High Court observed that all aided and unaided schools perform Government functions of promoting high quality education. The fact that education is a public activity cannot be ignored.

12. ದಿನಾಂಕ 09.06.2015ರಂದು ಸಾರ್ವಜನಿಕ ಮಾಹಿತಿ ಅಧಿಕಾರಿಯ ಹಾಗೂ ಜಂಟಿ ನಿರ್ದೇಶಕರು (ಆಡಳಿತ), ನಿರ್ದೇಶಕರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ ರವರು ಆಯೋಗಕ್ಕೆ ಸಲ್ಲಿಸಿರುವ ಪತ್ರದ ಸಂಖ್ಯೆ ಡಿ.ಟಿ.ಇ 334 ಮಾಹಕಾ/2013ರ ಪತ್ರದ ಜೊತೆಯಲ್ಲಿ ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ಖಾಸಗಿ ಕಾಲೇಜಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಮಾತ್ರ ಕಾಲೇಜು ಆಡಳಿತ ಮಂಡಳಿಯು ಶೇ.60:20:20ರ ಅನುಪಾತದಲ್ಲಿ ಎರಡು ಕಂತುಗಳಲ್ಲಿ ಒಟ್ಟು ಎರಡು ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಆ ಮೊತ್ತವನ್ನು ಅನುಪಾತದಲ್ಲಿ ವಿವರಿಸುವಂತೆ ಖರ್ಚು ಮಾಡುವ ಬಗ್ಗೆ PIP (Project Implimentation Plan) guidelines issued by MHRD/WORLD BANK and NPIU) ನಲ್ಲಿ ಅವಕಾಶ ಇರುವುದನ್ನು ಅನುಬಂಧ 1ರಲ್ಲಿ ಹಾಗೂ ಕೇಂದ್ರ ಸರ್ಕಾರದ ಅನುದಾನದ ಬಿಡುಗಡೆ ಆದೇಶ, ರಾಜ್ಯ ಸರ್ಕಾರದ ಬಿಡುಗಡೆ ಆದೇಶಗಳನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ. ಸದರಿ ಆದೇಶದನ್ವಯ ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರಿಗೆ ಕೇಂದ್ರ ಸರ್ಕಾರದ ವತಿಯಿಂದ ಆದೇಶ ಸಂಖ್ಯೆ F.No.16-5/2013-TS.VII (Pt.) ದಿನಾಂಕ 10ನೇ ಜುಲೈ 2013 ರಂದು 58.12 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿರುತ್ತಾರೆ. ರಾಜ್ಯ ಸರ್ಕಾರ ತನ್ನ ಪಾಲಾದ ಶೇ.25% ಒದಗಿಸಲು ಬದ್ದರಾಗಿ ಸರ್ಕಾರದ ಆದೇಶ ಸಂಖ್ಯೆ E.D:53 HPT: 2013 ದಿನಾಂಕ 16.09.2013 ರಂದು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿಯೊಂದಿಗೆ ಅನುಮೋದನೆಯನ್ನು ಹೊರಡಿಸಿರುತ್ತಾರೆ.

13. ದಿನಾಂಕ 19.10.2013 ರ ಪತ್ರದ ಜೊತೆಯಲ್ಲಿ ಚೆಕ್ ಸಂಖ್ಯೆ 338009 ದಿನಾಂಕ 11.10.2013 ರ ಮುಖಾಂತರ ರೂ.100.00 ಲಕ್ಷಗಳನ್ನು 2ನೇ ಕಂತಿನ ಅನುದಾನವಾಗಿ ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್, ಧಾರವಾಡ ರವರಿಗೆ ಬಿಡುಗಡೆಗೊಳಿಸಿರುತ್ತಾರೆ.

14. ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 08.05.2015, 28.09.2015 ಮತ್ತು 17.05.2016 ರಂದು ಕ್ರಮವಾಗಿ ವಿಚಾರಣೆಯನ್ನು ನಡೆಸಲಾಗಿದೆ.

KARNATAKA INFORMATION COMMISSION

15. ದಿನಾಂಕ 17–05–2016 ರಂದು ಪ್ರಕರಣದ ವಿಚಾರಣೆಯನ್ನು ನಡೆಸಿದ ಸಂದರ್ಭದಲ್ಲಿ, ತಮ್ಮ ಸಂಸ್ಥೆಯ 3 ವರ್ಷಗಳ ಕ್ರೋಢೀಕೃತ (**Consolidated**) ಆಡಿಟ್ ವರದಿಯನ್ನು ಒಂದು ತಿಂಗಳೊಳಗಾಗಿ ಸಲ್ಲಿಸಬೇಕೆಂದು ಡಾ: ಎಸ್.ಬಿ.ವನಕುದ್ರಿ, ಪ್ರಾಂಶುಪಾಲರು, ಎಸ್.ಡಿ.ಎಂ. ಇಂಜಿನಿಯರಿಂಗ್ ಕಾಲೇಜು, ಧಾರವಾಡ ರವರಿಗೆ ನಿರ್ದೇಶಿಸಿತ್ತು.

16. ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರು ತಮ್ಮ ಕ್ರೋಢೀಕೃತ ಮೂರು ವರ್ಷಗಳ ಆಡಿಟ್ ವರದಿಯನ್ನು ಸಲ್ಲಿಸಿದ್ದು, ಸದರಿ ಆಡಿಟ್ ವರದಿಯಲ್ಲಿ ಅನುದಾನಕ್ಕಿಂತ ಶೇ.90ರಷ್ಟು ಹೆಚ್ಚಿನ ಪ್ರಮಾಣದಲ್ಲಿ ವೆಚ್ಚ ಮಾಡಿರುವುದರಿಂದ ಪ್ರಕರಣದಲ್ಲಿ ಸಂಸ್ಥೆಯು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 2(ಹೆಚ್) ರಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವಲ್ಲವೆಂದು ತಿಳಿಸಿ ಮುಕ್ತಾಯಗೊಳಿಸಲು ಕೋರಿರುತ್ತಾರೆ.

17. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ: ಸಿವಿಲ್ ಅಪಿಲ್ ನಂ. 9017/2013 ರಲ್ಲಿ ಕೆಳಕಂಡಂತೆ ತೀರ್ಮಾನಿಸಿರುವುದನ್ನು ಉಲ್ಲೇಖಿಸುತ್ತಾ,

We have a decision of our Hon'ble supreme court of India in Thalappalam Ser. Co-op Bank Ltd and others vs State of Kerala case, wherein in the paras 38 and 39 it is held as below:-

> *38. Merely providing subsidiaries, grants, exemptions, privileges etc., as such, cannot be said to be providing funding to a substantial extent, unless the record shows that the funding was so substantial to the body which practically runs by such funding and but for such funding, it would struggle to exist. The State may also float many schemes generally for the betterment and welfare of the cooperative sector like deposit guarantee scheme, scheme of assistance from NABARD etc., but those facilities or assistance cannot be termed as "substantially financed" by the State Government to bring the body within the fold of "public authority" under Section 2(h)(d)(i) of the Act. But, there are instances, where private educational institutions getting ninety five per cent grant-in-aid from the appropriate government, may answer the definition of public authority under Section 2(h)(d)(i).*

KARNATAKA INFORMATION COMMISSION

NON-GOVERNMENT ORGANISATIONS:

39. The term "Non-Government Organizations" (NGO), as such, is not defined under the Act. But, over a period of time, the expression has got its own meaning and, it has to be seen in that context, when used in the Act. Government used to finance substantially, several non-government organizations, which carry on various social and welfare activities, since those organizations sometimes carry on functions which are otherwise governmental. Now, the question, whether an NGO has been substantially financed or not by the appropriate Government, may be a question of fact, to be examined by the authorities concerned under the RTI Act. Such organization can be substantially financed either directly or indirectly by funds provided by the appropriate Government. Government may not have any statutory control over the NGOs, as such, still it can be established that a particular NGO has been substantially financed directly or indirectly by the funds provided by the appropriate Government, in such an event, that organization will fall within the scope of Section 2(h)(d)(ii) of the RTI Act. Consequently, even private organizations which are, though not owned or controlled but substantially financed by the appropriate Government will also fall within the definition of "public authority" under Section 2(h)(d)(ii) of the Act

18. ಆಯೋಗವು ಮೇಲಿನ ಅಂಶಗಳನ್ನು ಜೊತೆಗೆ ಪ್ರತಿವಾದಿ ಸಂಸ್ಥೆಯಾದ ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 2(ಹೆಚ್)ರ ವಿವರಣೆಯನ್ನು ಕೆಳಕಂಡಂತೆ ಉಲ್ಲೇಖಿಸಲಾಗಿದೆ.

Section 2(h) of the RTI Act says as follows:

(h) "public authority" means any authority or body or institution of self-government established or constituted—

KARNATAKA INFORMATION COMMISSION

(a) by or under the Constitution;
(b) by any other law made by Parliament;
(c) by any other law made by State Legislature;
(d) by notification issued or order made by the appropriate Government, and includes any—
    (i)body owned, controlled or substantially financed;
    (ii)non-Government organisation substantially financed, directly or indirectly by funds provided by the appropriate Government

The Act thus defines public authorities in two parts. The first part of the definition (clauses 2(h)(a) to (d))clearly delineate bodies created by the Constitution of India (Union and state executives, Election Commission, etc.), by laws made by Parliament and state legislatures (Central and state universities, regulators such as RBI, SEBI, TRAI etc.), and by government orders or notifications (Planning Commission) as public authorities.

The second part broadens the scope of the definition of a Public authority to include any body owned, controlled or substantially financed, and any non-governmental body substantially financed by the appropriate government. This second part of the definition has been the subject of much controversy largely because it leaves the question of what constitutes (a) ownership, (b) control or/and (c) substantial financing open to interpretation. Unsurprisingly therefore, most of the case law related to the question of public authorities is linked to this aspect of the definition.One area of controversy that has emerged in relation to the first part of the definition – i.e. bodies created by law – was regarding whether entities registered under various laws become public authorities merely by reason of their

KARNATAKA INFORMATION COMMISSION

incorporation or registration. The Delhi High Court has decided this issue, and unambiguously stated that the mere establishment of a body under a statute will not automatically render it a public authority for the purposes of the RTI Act. Therefore, companies incorporated under the Companies Act, 1956, societies and trusts registered under laws providing for their creation and registration do not become public authorities merely by virtue of Section 2(h)(d) of the RTI Act. Words such as 'control' and 'substantial financing' have been construed liberally to widen the ambit of the RTI Act by bringing a variety of entities within the definition of public authority.

19. ಪ್ರಕರಣವನ್ನು ಅವಲೋಕಿಸಿದ ಆಯೋಗವು ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ವು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಶೇಕಡವಾರು ಅನುದಾನ ಪಡೆಯುತ್ತಿದ್ದು, ಮಾಹಿತಿ ಹಕ್ಕು ಕಾಯ್ದೆ 2005ರ ಅಧ್ಯಾಯ–1ರ ಕಲಂ 2(ಹೆಚ್) ರ

(ಡಿ)(i)ಸಮುಚಿತ ಸರ್ಕಾರದ ಒಡೆತನಕ್ಕೆ, ನಿಯಂತ್ರಣಕ್ಕೆ ಒಳಪಟ್ಟ ಅಥವಾ ಅಂಥ ಸರ್ಕಾರ ಒದಗಿಸಿದ ನಿಧಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಹಣಕಾಸು ನೆರವು ಪಡೆದ ಯಾವುದೇ ನಿಕಾಯವನ್ನು;

(ii)ಸಮುಚಿತ ಸರ್ಕಾರ ಒದಗಿಸಿದ ನಿಧಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಹಣಕಾಸು ನೆರವು ಪಡೆದ ಸರ್ಕಾರೇತರ ಸಂಸ್ಥೆಯನ್ನು– ಒಳಗೊಳ್ಳುತ್ತದೆ ಮತ್ತು

(iii)ದಿನಾಂಕ: 05.09.2013 ರಂದು ಜಂಟಿ ನಿರ್ದೇಶಕರು(ಆಡಳಿತ) ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ ರವರು ಪ್ರತಿವಾದಿ ಸಂಸ್ಥೆಯು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಕಾಯ್ದೆಯ ಕಲಂ 6(3)ರಡಿಯಲ್ಲಿ ಮಾಹಿತಿ ಕೋರಿಕೆ ಅರ್ಜಿಯನ್ನು ವರ್ಗಾಯಿಸಿರುವುದನ್ನು

ಹಾಗೂ ಕಾಯ್ದೆಯ 18(1)(ಎ)ರನ್ವಯ ಈ ಅಧಿನಿಯಮದಡಿಯಲ್ಲಿ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಅಥವಾ ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಅಂಥ ಯಾರೇ ಅಧಿಕಾರಿಯನ್ನು ನಿಯೋಜಿಸಲಾಗಿಲ್ಲವೆಂಬ ಸಂದರ್ಭವನ್ನು ಪರಿಗಣಿಸಿ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 2(ಹೆಚ್)ರಡಿಯಲ್ಲಿ ಎಸ್.ಡಿ.ಎಂ.ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು

KARNATAKA INFORMATION COMMISSION

ಟೆಕ್ನಾಲಜಿ, ಧಾರವಾಡ ಸಂಸ್ಥೆಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 2(ಹೆಚ್)ರನ್ವಯ ಘೋಷಿಸಿದೆ.

20. ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 19(8)(a)(ii)ರನ್ವಯ ಸಂದರ್ಭಾನುಸಾರ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಡಾ: ಎಸ್.ಬಿ.ವನಕುದ್ರೆ, ಪ್ರಾಂಶುಪಾಲರು, ಎಸ್.ಡಿ.ಎಂ.ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯೆಂದು ನೇಮಿಸಲಾಗಿದೆ.

21. ದಿನಾಂಕ 03.09.2013 ರಂದು ಅರ್ಜಿದಾರರು ಕೋರಿರುವ ಮಾಹಿತಿಯನ್ನು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 7(1)ರಂತೆ ನಿಯಮಾನುಸಾರವಾಗಿ ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನದೊಳಗಾಗಿ ಉಚಿತವಾಗಿ ದೃಢೀಕರಿಸಿ ಅರ್ಜಿದಾರರಿಗೆ ಒದಗಿಸಬೇಕೆಂದು ಹಾಗೂ ಮಾಹಿತಿಯ ಪ್ರತಿಗಳೊಂದಿಗೆ ವರದಿಯನ್ನು ಸಲ್ಲಿಸಬೇಕೆಂದು ಡಾ: ಎಸ್.ಬಿ.ವನಕುದ್ರೆ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಪ್ರಾಂಶುಪಾಲರು, ಎಸ್.ಡಿ.ಎಂ.ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ರವರಿಗೆ ಆದೇಶಿಸಿದೆ.

22. ಕೈಗೊಂಡ ಕ್ರಮವನ್ನು ಪರಿಶೀಲಿಸುವ ಸಲುವಾಗಿ, ಪ್ರಕರಣವನ್ನು ದಿನಾಂಕ: 14.12.2016 ರಂದು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

23. ಆಯೋಗದ ಮುದ್ರಾಂಕದೊಂದಿಗೆ ಹಾಗೂ ನನ್ನ ರುಜುವಿನೊಂದಿಗೆ ದಿನಾಂಕ: 07.09.2016 ರಂದು ಹೊರಡಿಸಿದೆ.

(ಎಲ್. ಕೃಷ್ಣಮೂರ್ತಿ)
ರಾಜ್ಯ ಮಾಹಿತಿ ಆಯುಕ್ತರು

ಕಮಾಆ 1319 ಎಪಿಎಲ್ 2014	ಕಮಾಆ 1319 ಎಪಿಎಲ್ 2014
1. ಶ್ರೀ ಪ್ರೊ. ಪಿ.ಬಿ. ಜೋಶಿ, ಹರಿಪ್ರಿಯಾ, ಶಲ್‌ಮಾಲ ಕಾಲೋನಿ, ಕಲ್ಯಾಣನಗರ 1ನೇ ಅಡ್ಡರಸ್ತೆ, ಧಾರವಾಡ ಜಿಲ್ಲೆ, ಧಾರವಾಡ–580 007.	2. ಶ್ರೀ ನಿರಂಜನ್ ದಾಸ್ ರಾಜ್ ಭಾನೆ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು(ಆಡಳಿತ), ನಿರ್ದೇಶಕರ ಕಛೇರಿ, ತಾಂತ್ರಿಕ ಶಿಕ್ಷಣ ಭವನ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು –560 001.
ಕಮಾಆ 1319 ಎಪಿಎಲ್ 2014(ಆರ್.ಪಿ.ಎ.ಡಿ.)	
3. ಡಾ: ಎಸ್.ಬಿ.ವನಕುದ್ರೆ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಪ್ರಾಂಶುಪಾಲರು, ಎಸ್.ಡಿ.ಎಂ.ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ–560 001.	

1. ಮಾಹಿತಿ ಹಕ್ಕು ಕಾಯ್ದೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ತಮ್ಮ ಹೆಸರು, ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

COMMISSION KAR